ಸಿಸಿ ಃ 463/2024

ಚಾಸಾ –1

ಪ್ರಾಸಾ –1

# ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ

ಸಿಸಿ ಃ 463/2024

ಸಾಕ್ಷಿದಾರರ ಹೆಸರುಃ ಗೋಪಾಲ.ಎಂ.ಎ
ತಂದೆ ಹೆಸರುಃ ಲೇಟ್ ಅಪ್ಪಯ್ಯ
ವಯಸ್ಸುಃ 49
ವೃತ್ತಿಃ ಉಪ ನಿರೀಕ್ಷಕರು
ವಾಸಸ್ಥಳಃ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 04-04-2025

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನಾನು 2023 ಅಕ್ಟೋಬರ್ ನಿಂದ ಇಲ್ಲಿಯವರೆಗೆ ಸೋಮವಾರಪೇಟೆ ಠಾಣೆಯಲ್ಲಿ ಉಪ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ11-07-2024 ರಂದು ಸಂಜೆ 6 ಗಂಟೆಗೆ ಠಾಣೆಯಲ್ಲಿರುವಾಗ ಚಾಸಾ 3 ರವರು ನೀಡಿದ ವರದಿ ಹೊಂದಿಕೊಂಡು 6.20 ಗಂಟೆಗೆ ಠಾಣಾ ಮೊಕ್ಕದ್ದಮ್ಮೆ ನಂ.81/2024 ರಂತೆ ಪ್ರಕರಣ ದಾಖಲಿಸಿಕೊಂಡು, 18.45 ಗಂಟೆಗೆ ಯಡವಾರೆ ಗ್ರಾಮದ ಆರೋಪಿಯ ಮನೆಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಸಂಬಂಧ ದಾಳಿ ಮಾಡಲು ಸಿಬ್ಬಂದಿಗಳಿಗೆ ಮಾಹಿತಿ ನೀಡಿ ಇಲಾಖಾ ವಾಹನದಲ್ಲಿ ಚಾಸಾ 7 ರವರೊಂದಿಗೆ ಸಿಬ್ಬಂದಿಗಳಾದ ಚಾಸಾ 3 ರಿಂದ 6 ರವರ ಜೊತೆ ಯಡವಾರೆ ಗ್ರಾಮಕ್ಕೆ ತಲುಪಿ 7.10 ಗಂಟೆಗೆ ಸಿಬ್ಬಂದಿಗಳಾದ ಸಹಾಯದಿಂದ ಪಂಚರಾದ ಚಾಸಾ 8, 9 ರವರನ್ನು ಕರೆಸಿ ಅವರಿಗೆ ಈ ಪ್ರಕರಣದ ಸಂಬಂಧ ಮಾಹಿತಿ ನೀಡಿ ದಾಳಿ ನಡೆಸಲು ಪಂಚರಾಗಲು ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡು ಸದರಿಯವರಿಗೆ ನೋಟಿಸು ಜಾರಿ ಮಾಡಿ ನಂತರ ಆರೋಪಿಯ ಮನೆಗೆ ಪಂಚರು ಹಾಗೂ ಸಿಬ್ಬಂದಿಗಳ ಮುಖಾಂತರ ತೆರಳಿ ಆರೋಪಿ ಮನೆಯ ಬಾಗಿಲು ಬಳಿ ಇದ್ದು, ಅವರಿಗೆ ಪ್ರಕರಣದ ವಿಚಾರ ತಿಳಿಸಿ ಮನೆಯನ್ನು ಶೋಧನೆ ಮಾಡಬೇಕಾಗಿರುವುದರಿಂದ ಆರೋಪಿಗೆ ನೋಟಿಸು ಜಾರಿ ಮಾಡಿ ಪಂಚರ ಹಾಗೂ ಸಿಬ್ಬಂದಿ ಸಹಾಯದಿಂದ ಮನೆಯ ಒಳಗೆ ಹೋಗಿ ಮನೆಯ ಎಡ ಭಾಗದ ರೂಮಿನಲ್ಲಿ ಶೋಧಿಸುತ್ತಿರುವಾಗ ಎರಡು ಬಾಕ್ಸ್ ನಲ್ಲಿ ಮದ್ಯದ ಬಾಟಲಿಗಳು

ಹಾಗೂ ಪ್ಯಾಕೇಟ್ ಗಳು ಕಂಡು ಬಂದು ಪಂಚರ ಸಮಕ್ಷಮ ಲೆಕ್ಕ ಮಾಡಲಾಗಿ ಒಂದು ಡಿ.ಎಸ್,ಪಿ ಬ್ಲಾಕ್ ಡಿಲಕ್ಸ್ ವಿಸ್ಕಿ **180** ಮಿಲಿಯ **10** ಬಾಟಲ್ ಗಳು ಇದ್ದು ಅದರ ಸಿರಿಯರ್ ನಂಬರ್ ಅನ್ನು ಗುರುತು ಮಾಡಲಾಯಿತು. ನಂತರ **90** ಮಿಲಿಯ **20** ಟೆಟ್ರಾ ಪ್ಯಾಕೇಟ್ ಇದ್ದು ಅವುಗಳ ಮೇಲೆ ಮೆಕ್ ಡವೆಲ್ ಇಂಡಿಯನ್ ಬ್ರಾಂಡಿ ಎಂದು ನಮೂದಿಸಿದ್ದು, **180** ಮಿಲಿಯ **7** ಟೆಟ್ರಾ ಪ್ಯಾಕೇಟ್ ಇದ್ದು ಇದರ ಮೇಲೆ ಓಲ್ಡ್ ಟವರೆನ್ ವಿಸ್ಕಿ ಎಂದು ನಮೂದಿರುತ್ತದೆ. **180** ಮಿಲಿಯ ಬಿಜಾಯ್ಸ್ ಇಂಡಿಯನ್ ಬ್ರಾಂಡಿ ರಮ್ ನ **8** ಟೆಟ್ರಾ ಪ್ಯಾಕೇಟ್ ಇತ್ತು. **180** ಮಿಲಿಯ **11** ಪ್ಯಾಕೇಟ್ ಇದ್ದು ಅದರ ಮೇಲೆ ಓಲ್ಡ್ ಮಂಕ್ ಸ್ಪೆಷಲ್ ತ್ರಿಬಲ್ ಎಕ್ಸ್ ಎಂದು ನಮೂದಿರುತ್ತದೆ. **500** ಮಿಲಿಯ **24** ಕೆಂಪು ಟಿನ್ ಇದ್ದು ಅದರ ಮೇಲೆ ಯುಬಿ ಎಕ್ಸ್ ಪರ್ಟ್ ಸ್ಟ್ರಾಂಗ್ ಪ್ರಿಮಿಯಂ ಬಿಯರ್ ಎಂದು ನಮೂದಿರುತ್ತದೆ. ನಂತರ ಪಂಚರ ಸಮಕ್ಷಮ ಹಾಗೂ ಸಿಬ್ಬಂದಿಗಳ ಸಹಾಯದಿಂದ ಎಫ್.ಎಸ್.ಎಲ್ ಪರೀಕ್ಷೆಗೆಂದು **180** ಮಿಲಿಯ ಡಿ.ಎಸ್.ಪಿ. ಬ್ಲಾಕ್ ವಿಸ್ಕಿಯ **3** ಬಾಟಲ್, **90** ಮಿಲಿಯ ಮೆಕ್ ಡವೆಲ್ ಇಂಡಿಯನ್ ಬ್ರಾಂಡಿಯ **4** ಪ್ಯಾಕೇಟ್, **180** ಮಿಲಿಯ ಓಲ್ಡ್ ಟವರೆನ್ ವಿಸ್ಕಿಯ **3** ಪ್ಯಾಕೇಟ್, **180** ಮಿಲಿಯ ಬಿಜಾಯ್ ಇಂಡಿಯನ್ ಬ್ರಾಂಡಿಯ **3, 180** ಮಿಲಿಯ ತ್ರಿಬಲ್ ಎಕ್ಸ್ ರಮ್ ನಲ್ಲಿ **3** ಪ್ಯಾಕೇಟ್. **500** ಮಿಲಿಯ ಸ್ಟ್ರಾಂಗ್ ಬಿಯರ್ ನ **2** ಟಿನ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ತೆಗೆದು ಪಂಚರ ಸಮಕ್ಷಮ ಪ್ಯಾಕ್ ಮಾಡಿ ಅದಕ್ಕೆ ಎಸ್ ಎಂಬ ಗುರುತಿನಲ್ಲಿ ಸೀಲ್ ಮಾಡಿ ರಟ್ಟಿನ ಬಾಕ್ಸ್ ನಲ್ಲಿ ಇಡಲಾಯಿತು. ನಂತರ ಉಳಿದ ಮದ್ಯವನ್ನು ಇನ್ನೊಂದು ರಟ್ಟಿನ ಪೆಟ್ಟಿಗೆಯಲ್ಲಿಟ್ಟು ಸ್ವಾದೀನಕ್ಕೆ ಪಡೆದು ನಂದ ಕುಮಾರ್ ರವರ ಮುಖಾಂತರ ಸ್ಥಳ ಮಹಜರ್ ಅನ್ನು ಬರೆಸಿ ಚಾಸಾ **6** ರವರ ಮೂಲಕ ವಿಡಿಯೋ ಮತ್ತು ಛಾಯಾ ಚಿತ್ರ ತೆಗೆಸಲಾಯಿತು. ಮಹಜರ್ ಅನ್ನು **7.20** ರಿಂದ **8.30** ರವರೆಗೆ ಬರೆಸಲಾಯಿತು. ನಂತರ ಆರೋಪಿ ಹಾಗೂ ಮದ್ಯವನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಹಾಜರಾಗಿ ಸ್ವತ್ತುಗಳ ಪಟ್ಟಿಯಲ್ಲಿ ನಮೂದಿಸಿ

ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ನಂತರ ಸಾಕ್ಷಿದಾರರಾದ ಚಾಸಾ 2 ರಿಂದ 7 ರವರ ಹೇಳಿಕೆ ಪಡೆಯಲಾಯಿತು. ಚಾಸಾ 16 ರವರಿಗೆ ಸದರಿ ಮದ್ಯ ಯಾವ ಅಂಗಡಿಗೆ ಮಾರಾಟ ಮಾಡಲಾಗಿದೆ ಎಂದು ಮಾಹಿತಿ ಕೇಳಿದ್ದು ಅವರು ಮಾಹಿತಿ ನೀಡಿರುತ್ತಾರೆ. ಚಾಸಾ 6 ರವರಿಂದ ಕಲಂ 63(4) ಪ್ರಮಾಣ ಪತ್ರ ಪಡೆದಿರುತ್ತೇನೆ. ಚಾಸಾ 10 ರವರ ಮುಖಾಂತರ ಮಾದರಿಗೆ ತೆಗೆದ ಮದ್ಯವನ್ನು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ಚಾಸಾ 11 ರವರು ನೀಡಿದ ವರದಿ ಪಡೆದಿರುತ್ತೇನೆ. ಚಾಸಾ 18 ರವರಿಂದ ಆರೋಪಿಯ ವಾಸದ ದೃಡೀಕರಣ ಪಡೆದಿರುತ್ತೇನೆ. ಚಾಸಾ 16 ರವರ ನೀಡಿದ ಮಾಹಿತಿ ಮೇರೆಗೆ ಸಾಕ್ಷಿದಾರರಾದ 12 ರಿಂದ 15 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅಬಕಾರಿ ಕೇಂದ್ರಕ್ಕೆ ಉಳಿದ ಮದ್ಯವನ್ನು ಹಸ್ತಾಂತರಿಸಲು ಅನುಮತಿ ಕೇಳಿದ್ದು ಜಿಲ್ಲಾ ಅಬಕಾರಿ ಅಧೀಕ್ಷಕರು ಅನುಮತಿ ನೀಡಿದ ಮೇರೆಗೆ ಸೋಮವಾರಪೇಟೆ ಅಬಕಾರಿ ನಿರೀಕ್ಷಕರಿಗೆ ಉಳಿದ ಮದ್ಯವನ್ನು ಹಸ್ತಾಂತರ ಮಾಡಿರುತ್ತೇನೆ. ಈ ಬಗ್ಗೆ ಸ್ವೀಕೃತಿ ಪಡೆದಿರುತ್ತೇನೆ. ನಂತರ ಆರೋಪಿಯ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ.

ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು, ಪ್ರ.ವ.ವರದಿ ಅನ್ನು ನಿಪಿ 2 ಎಂದು, ಸಹಿಯನ್ನು ನಿಪಿ 2ಎ ಎಂದು, ಶೋಧನಾ ವಾರೆಂಟ್ ಅನ್ನು ನಿಪಿ 3 ಎಂದು, ಸಹಿಯನ್ನು ನಿಪಿ 3ಎ ಎಂದು, ಅಮಾನತ್ತು ಮಹಜರ್ ಅನ್ನು ನಿಪಿ 4 ಎಂದು, ಸಹಿಯನ್ನು ನಿಪಿ 4ಎ ಎಂದು, ಕಚ್ಚಾ ನಕಾಶೆಯನ್ನು ನಿಪಿ 5 ಎಂದು, ಸಹಿಯನ್ನು ನಿಪಿ 5ಎ ಎಂದು, ಚಾಸಾ 16 ರವರಿಗೆ ಮದ್ಯ ಮಾರಾಟದ ಬಗ್ಗೆ ದೃಡೀಕರಣ ಕೋರಿ ಮಾಡಿಕೊಂಡ ಕೋರಿಕೆಯನ್ನು ನಿಪಿ 6 ಎಂದು, ಸಹಿಯನ್ನು ನಿಪಿ 6ಎ ಎಂದು, ಅಬಕಾರಿ ಇಲಾಖೆ ಕುಶಾಲನಗರ ರವರಿಗೆ ಮದ್ಯ ಮಾರಾಟದ ಸನದಿನ ಬಗ್ಗೆ ದಾಖಲೆ ಕೋರಿದ್ದ ಕೋರಿಕೆಯನ್ನು ನಿಪಿ 7 ಎಂದು, ಸಹಿಯನ್ನು ನಿಪಿ 7ಎ ಎಂದು, ಚಾಸಾ 18 ರವರಿಗೆ ವಾಸದ ದೃಡೀಕರಣ ನೀಡುವಂತೆ ಮಾಡಿಕೊಂಡ

ಕೋರಿಕೆಯನ್ನು ನಿಪಿ **8** ಎಂದು, ಸಹಿಯನ್ನು ನಿಪಿ **8**ಎ ಎಂದು, ಚಾಸಾ **18** ರವರು ನೀಡಿರುವ ವಾಸದ ದೃಡೀಕರಣವನು ನಿಪಿ **9** ಎಂದು, ಛಾಯಾ ಚಿತ್ರಗಳನ್ನು ನಿಪಿ **10, 11** ಎಂದು, ಸಹಿಯನ್ನು ನಿಪಿ **11**ಎ ಎಂದು, ಸಿಡಿಯನ್ನು ನಿಪಿ **12** ಎಂದು, ಕಲಂ **63(4)** ಪ್ರಮಾಣ ಪತ್ರವನ್ನು ನಿಪಿ **13** ಎಂದು, ಸಹಿಯನ್ನು ನಿಪಿ **13**ಎ ಎಂದು, ಅಮಾನತ್ತು ಪಡಿಸಿಕೊಂಡ ಮದ್ಯವನ್ನು ಅಬಕಾರಿ ಇಲಾಖೆಯವರಿಗೆ ವರ್ಗಾಯಿಸಲು ಮಾಡಿಕೊಂಡ ಕೋರಿಕೆಯನು ನಿಪಿ **14** ಎಂದು, ಸಹಿಯನ್ನು ನಿಪಿ **14**ಎ ಎಂದು, ಚಾಸಾ **16** ರವರು ನೀಡಿರುವ ವರದಿಯನ್ನು ನಿಪಿ **15** ಎಂದು, ಸಹಿಯನ್ನು ನಿಪಿ **15**ಎ ಎಂದು, ರಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ನೀಡಿದ ಬಗ್ಗೆ ಹಿಂಬರಹ ವನ್ನು ನಿಪಿ **16** ಎಂದು, ಸಹಿಯನ್ನು ನಿಪಿ **16**ಎ ಎಂದು, ರಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ **17** ಎಂದು, ಸಹಿಯನ್ನು ನಿಪಿ **17**ಎ ಎಂದು ಗುರುತಿಸಲಾಯಿತು.

**180** ಮಿಲಿಯ ಡಿ.ಎಸ್.ಪಿ. ಬ್ಲಾಕ್ ವಿಸ್ಕಿಯ **3** ಬಾಟಲ್ ಅನ್ನು ಮುಮಾ **1** ಎಂದು, **90** ಮಿಲಿಯ ಮೆಕ್ ಡವೆಲ್ ಇಂಡಿಯನ್ ಬ್ರಾಂಡಿಯ **4** ಪ್ಯಾಕೇಟ್ ಅನ್ನು ಮುಮಾ **2** ಎಂದು, **180** ಮಿಲಿಯ ಓಲ್ಡ್ ಟವರೆನ್ ವಿಸ್ಕಿಯ **3** ಪ್ಯಾಕೇಟ್ ಅನ್ನು ಮುಮಾ **3** ಎಂದು, **180** ಮಿಲಿಯ ಬಿಜಾಯ್ ಇಂಡಿಯನ್ ಬ್ರಾಂಡಿಯ **3** ಪ್ಯಾಕೇಟ್ ಅನ್ನು ಮುಮಾ **4** ಎಂದು, **180** ಮಿಲಿಯ ತ್ರಿಬಲ್ ಎಕ್ಸ್ ರಮ್ ನಲ್ಲಿ **3** ಪ್ಯಾಕೇಟ್ ಅನ್ನು ಮುಮಾ **5** ಎಂದು. **500** ಮಿಲಿಯ ಸ್ಟ್ರಾಂಗ್ ಬಿಯರ್ ನ **2** ಟಿನ್ ಅನ್ನು ಮುಮಾ **6** ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು ಗುರುತಿಸುವ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಕೆ.ಎಸ್.ಪಿ ವಕೀಲರಿಂದ

ನನಗೆ ಸಂಜೆ 6 ಗಂಟೆಗೆ ದೂರು ಬಂದಿರುತ್ತದೆ. ದೂರಿನಲ್ಲಿ ಸಮಯ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ಆ ದಿನ 3 ರವರಿಗೆ ಬೀಟ್ ಇತ್ತು. ಆ ಬಗ್ಗೆ ಕರ್ತವ್ಯ ಹಂಚಿಕೆಯಲ್ಲಿ ಬರೆದಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿ ಎಷ್ಟು ಮದ್ಯ ಖರೀದಿ ಮಾಡಿದ್ದ ಎಂದು ವಿಚಾರಿಸಿಲ್ಲ. ಎಷ್ಟು ಮದ್ಯ ಮಾರಾಟ ಮಾಡಿದ್ದ ಎಂದು ವಿಚಾರಿಸಿಲ್ಲ. ಯಾವ ಯಾವ ಮದ್ಯವನ್ನು ಎಷ್ಟು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂದು ವಿಚಾರಿಸಿಲ್ಲ. ಮದ್ಯ ಖರೀದಿ ಮಾಡಲು ಯಾರು ಬಂದಿರಲಿಲ್ಲ. ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಸಹ ವಿಚಾರಣೆ ಮಾಡಿಲ್ಲ. ಆರೋಪಿಯಿಂದ ಹಣವನ್ನು ವಶಪಡಿಸಿಕೊಂಡಿಲ್ಲ. ಶೋಧನಾ ವಾರೆಂಟ್ ಅನ್ನು 7.00 ಗಂಟೆಗೆ ತಯಾರು ಮಾಡಿರುತ್ತೇವೆ. ಆರೋಪಿಗೆ 7.20 ಗಂಟೆಗೆ ಜಾರಿ ಮಾಡಿರುತ್ತೇವೆ, ಆರೋಪಿಯ ಮನೆಗೆ ಹೋಗುವ ದಾರಿಯ ಎರಡು ಬದಿಯಲ್ಲಿ ಸಾಕಷ್ಟು ಮನೆಗಳಿವೆ ಎಂದರೆ ಸ್ವಲ್ಪ ದೂರದಲ್ಲಿವೆ. ನನಗೆ ಯಡವನಾಡು ಮತ್ತು ಯಡವಾರೆ ಬೇರೆ ಬೇರೆ ಗ್ರಾಮ ಎಂದು ಗೊತ್ತಿರುತ್ತದೆ. ಮಹಜರ್ ಅನ್ನು ಯಡವನಾಡು ಗ್ರಾಮದಲ್ಲಿ ಬರೆದ ಬಗ್ಗೆ ನಮೂದು ಇದೆ ಎಂದರೆ ಸರಿ. ಆರೋಪಿ ಯಡವಾರೆ ಗ್ರಾಮದಲ್ಲಿ ವಾಸವಾಗಿರುತ್ತಾರೆ . ಆರೋಪಿಯ ಮನೆಯಲ್ಲಿದ್ದವರನ್ನು ವಿಚಾರಣೆ ಮಾಡಿಲ್ಲ. ಆರೋಪಿಯ ಮನೆಯ ಅಕ್ಕ ಪಕ್ಕ ಮನೆಯವರನ್ನು ವಿಚಾರಣೆ ಮಾಡಿಲ್ಲ.

ಆರೋಪಿ ಮದ್ಯವನ್ನು ಬೇರೆ ಬೇರೆ ಅಂಗಡಿಗಳಿಂದ ತಂದ ಬಗ್ಗೆ ಬಿಲ್ಲುಗಳನ್ನು ವಶಪಡಿಸಿಕೊಂಡಿಲ್ಲ. ಒಬ್ಬ ವ್ಯಕ್ತಿಗೆ ಇಷ್ಟೇ ಮದ್ಯವನ್ನು ಮಾರಾಟ ಮಾಡಬೇಕು ಎಂಬ ನಿಯಮ ಇದೆ ಎಂದರೆ ಸರಿ. ಆರೋಪಿಗೆ ಹೆಚ್ಚಿಗೆ ಮದ್ಯ ಮಾರಾಟ ಮಾಡಿದ ಅಂಗಡಿಯವರನ್ನು ಆರೋಪಿಯನ್ನಾಗಿ ಮಾಡಿಲ್ಲ. ಎಲ್ಲಾ ಟಿನ್, ಬಾಟಲಿ, ಪ್ಯಾಕೇಟ್ ಗಳನ್ನು ರಸಾಯನಿಕ ವಿಶ್ಲೇಷಣೆಗೆ ಕಳುಹಿಸಿಲ್ಲ, ನಿಗಧಿತ ಬಾಟಲ್ ಗಳನ್ನು ಮಾತ್ರ ಕಳುಹಿಸಲಾಗಿದೆ. ಆ ದಿನ

**ಸಿಸಿ ಃ 463/2024**

**ಚಾಸಾ –1**

**ಪ್ರಾಸಾ –1**

ಸ್ಥಳಕ್ಕೆ ಹೋಗಿಲ್ಲ, ಮಹಜರ್ ಮಾಡಿಲ್ಲ, ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಿಡಿಯೋ ಮತ್ತು ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇಂತಹ ಟಿನ್, ಬಾಟಲಿ, ಪಾಕೇಟ್ ಎಲ್ಲಾ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಅವುಗಳನ್ನು ತಂದು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 3 ರವರಿಂದ ಸುಳ್ಳು ದೂರನ್ನು ಪಡೆದು ಸುಳ್ಳು ಪ್ರ.ವ.ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ).

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**